ದಿನಾಂಕಃ **06-07-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಪಿ ಡಿ ವಕೀಲರಿಂದ,**

1) ನನ್ನ ತಾತನ ಹೆಸರು ಬೋರೇಗೌಡ. ನನ್ನ ತಾತನ ಹೆಸರಿನಲ್ಲಿ ಎಷ್ಟು ವಿಸ್ತೀರ್ಣ ಆಸ್ತಿ ಇತ್ತು ಎಂದು ನನಗೆ ಗೊತ್ತಿರುವುದಿಲ್ಲ. ಆದರೆ ಒಂದು ಮನೆ ಇತ್ತು. ನನ್ನ ತಂದೆ ಮತ್ತು 1 ನೇ ಪ್ರತಿವಾದಿಯ ತಂದೆ ಅಣ್ಣತಮ್ಮಂದಿರು ಎಂದರೆ ಸರಿ. ನನ್ನ ತಂದೆ ಮತ್ತು 1 ನೇ ಪ್ರತಿವಾದಿಯ ತಂದೆ ನಡುವೆ ವಿಭಾಗ ಆಗಿರುತ್ತದೆ. ನನ್ನ ತಂದೆ ಭಾಗಕ್ಕೆ ದಾವಾ ಸರ್ವೆ ನಂಬರ್ ನಲ್ಲಿ ನಲ್ಲಿ 37 ಗುಂಟೆ ಆಸ್ತಿ ಬಂದಿರುತ್ತದೆ. ಪ್ರತಿವಾದಿ ತಂದೆಗೆ ವಿಭಾಗದಲ್ಲಿ ಯಾವ ಆಸ್ತಿ ಬಂದಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ತಂದೆಯ ಭಾಗಕ್ಕೆ ದಾವಾ ಆಸ್ತಿ ಬಂದಿರುತ್ತದೆ ಎಂದು ತೋರಿಸಲು ವಿಭಾಗ ಪತ್ರ ಹಾಜರುಪಡಿಸುತ್ತೇನೆ. ಪ್ರತಿವಾದಿ ತಂದೆಗೆ ತಮ್ಮಯ್ಯ ಎಂದು ಕರೆಯುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ.

2) ನನ್ನ ತಂದೆಗೆ ನಾವು ಒಟ್ಟು ಐದು ಜನ ಮಕ್ಕಳು. ನನ್ನ ತಂದೆ ಮೊದಲನೆ ಮಗಳು ಎಸ್ ಎ ಗಿರಿಜಾ, ಎರಡನೆಯವರು ಎಸ್ ಎ ಮಂಜುಳಾ, ಮೂರನೆಯವರು ಎಸ್ ಎ ಅನುಸೂಯ, ನಾಲ್ಕನೆಯವರು ರಂಗನಾಥ್ ಮತ್ತು ಐದನೆಯ ಮಗ ನಾನು. ಅಸಲು ದಾವೆ 400/1989 ರಲ್ಲಿ ನನ್ನ ತಂದೆ ಹೆಣ್ಣು ಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ಅಸಲು ದಾವೆ 400/1989 ಸಲ್ಲಿಸುವ ಕಾಲಕ್ಕೆ ದಾವಾ ಸ್ವತ್ತುಗಳ ಖಾತೆ ನನ್ನ ತಂದೆಯ ಹೆಸರಿನಲ್ಲಿ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆ ಸಲ್ಲಿಸುವ ಕಾಲಕ್ಕೆ ದಾವಾ ಸ್ವತ್ತುಗಳ ಖಾತೆ 1 ನೇ ಪ್ರತಿವಾದಿಯ ತಂದೆ ಹೆಸರಿನಲ್ಲಿ ಇತ್ತು ಎಂದರೆ ಸರಿ. ನಿಪಿ 1 ದಾವೆಯಲ್ಲಿ 1 ನೇ ಪ್ರತಿವಾದಿಯ ತಂದೆ ಪಕ್ಷಗಾರರನಾಗಿರುವುದಿಲ್ಲ.ನಿಪಿ 1 ದಾವೆಯಲ್ಲಿ ನಾನು, ನನ್ನ ತಂದೆ ಅಂಜನೀಗೌಡ, ರಂಗನಾಥ್ ಹಾಗೂ ಅನುಸೂಯ ಪಕ್ಷಗಾರರಾಗಿರುತ್ತೇವೆ ಎಂದರೆ ಸರಿ. ಸದರಿ ರಾಜಿ ಅರ್ಜಿಯಂತೆ ನಾನು ಅಂತಿಮ ಡಿಕ್ರಿ

ಪ್ರತಿಯನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನನ್ನ ವಾದ ಪತ್ರದಲ್ಲಿ ತೋರಿಸಿರುವ ವಂಶವೃಕ್ಷದಲ್ಲಿ ನನ್ನ ಇಬ್ಬರು ಸಹೋದರಿಯ ಹೆಸರನ್ನು ನಮೂದಿಸಿಲ್ಲ ಎಂದರೆ ಸರಿಯಲ್ಲ. ನನ್ನ ಸಹೋದರಿಯರಾದ ಮಂಜುಳಾ ಮತ್ತು ಗಿರಿಜಾ ರವರು ಜೀವಂತವಾಗಿ ಇದ್ದಾರೆ. ಸದರಿಯವರು ಬೆಂಗಳೂರಿನಲ್ಲಿ ವಾಸವಾಗಿದ್ದಾರೆ.

3) 1 ನೇ ಪ್ರತಿವಾದಿಯ ತಂದೆಯನ್ನು ಹನುಮೇಗೌಡ ಅಲಿಯಾಸ್ ತಮ್ಮಯ್ಯ ಅಲಿಯಾಸ್ ಬೋರೇಗೌಡ ಎಂದು ಕರೆಯುತ್ತಿದ್ದರು ಎಂದರೆ ಸರಿಯಲ್ಲ. ಆದರೆ ತಮ್ಮಯ್ಯ ಎಂದು ಕರೆಯುತ್ತಿದ್ದರು ಎಂದು ಸಾಕ್ಷಿ ನುಡಿಯುತ್ತಾರೆ. ನಾನು ಬೆಂಗಳೂರಿನ ಪ್ರಬುದ್ಧಾಲಯ ಆಶ್ರಮದಲ್ಲಿ ಸುಮಾರು ಆರು ವರ್ಷಗಳಿಂದ ವಾಸವಾಗಿರುತ್ತೇನೆ. ಸದರಿ ಆಶ್ರಮದಲ್ಲಿ ವಾಸವಾಗುವ ಪೂರ್ವದಲ್ಲಿ ಮೈಸೂರಿನಲ್ಲಿ ವಾಸವಾಗಿದ್ದೆ. ಮೈಸೂರಿನಲ್ಲಿ ನಾನು ಕಾಲೇಜು ದಿನಗಳಿಂದ ವಾಸವಾಗಿದ್ದೆ. ನಾನು ಬಿ ಇ ಪದವಿ ಪಡೆದುಕೊಂಡಿರುತ್ತೇನೆ.

4) ನಾನು ಸಾಲಿಗ್ರಾಮ ಗ್ರಾಮವನ್ನು ಎಷ್ಟು ವರ್ಷಗಳ ಹಿಂದೆ ಬಿಟ್ಟು ಹೋಗಿದ್ದೀರಾ ಎಂದು ಸಾಕ್ಷಿ ನಾನು ಆಗಾಗ್ಗ ಬಂದು ಹೋಗುತ್ತೇನೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತು ಪೂರ್ವಕ್ಕೆ ಆರ್ ಎಂ ಸಿ ಕೃಷಿ ಮಾರುಕಟ್ಟೆ, ಪಶ್ಚಿಮಕ್ಕೆ ಕಾಲುವೆ, ದಕ್ಷಿಣಕ್ಕೆ ರಸ್ತೆ, ಉತ್ತರಕ್ಕೆ ಯಾವ ಆಸ್ತಿ ಬರುತ್ತದೆ ಎಂದು ಗೊತ್ತಿರುವುದಿಲ್ಲ. ದಾವಾ ಅಸ್ತಿಯಲ್ಲಿ ಸುಮಾರು 10-15 ತೆಂಗಿನ ಮರಗಳು ಇರುತ್ತವೆ. ದಾವಾ ಸ್ವತ್ತಿನ ಪಕ್ಕದಲ್ಲಿ ಪ್ರತಿವಾದಿಗೆ ಸೇರಿದ ಮನೆ ಇರುತ್ತದೆ. ಪ್ರತಿವಾದಿ ಮನೆ ಕಟ್ಟಿರುವ ಆಸ್ತಿ ಯಾವ ಸರ್ವೆ ನಂಬರ್ ನಲ್ಲಿ ಬರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿಗೆ ಸೇರಿದ ಆಸ್ತಿಯಲ್ಲಿ ಧನದ ಕೊಟ್ಟಿಗೆ ಮತ್ತು ಕೋಳಿ ಫಾರಂ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಮಗೆ ಸೇರಿದ ಜಮೀನು ಮತ್ತು ಪ್ರತಿವಾದಿಗೆ ಸೇರಿದ ಆಸ್ತಿಯನ್ನು ಒಂದು ಭಾರಿ ಅಳತೆ ಮಾಡಿಸಿರುತ್ತೇವೆ. ಅಳತೆ ಮಾಡಿಸಿದ್ದೇವೆ ಎಂದು ತೋರಿಸಲು ಸರ್ವೆ ನಕ್ಷೆ ಹಾಜರುಪಡಿಸಲು ತೊಂದರೆ ಇರುವುದಿಲ್ಲ.

5) ಪ್ರತಿವಾದಿಗಳು ವಾಸವಾಗಿರುವ ಮನೆ, ಧನದ ಕೊಟ್ಟಿಗೆ ಮತ್ತು ಕೋಳಿ ಫಾರಂ ಆಸ್ತಿಗೂ ನನ್ನ ಆಸ್ತಿಗೂ ಸಂಬಂಧ ಇದೆಯಾ ಎಂದರೆ ಸಾಕ್ಷಿಯು ದಾವಾ ಸ್ವತ್ತಿನ ಚೆಕ್ಕುಬಂದಿಯಲ್ಲಿ ಸದರಿ ಆಸ್ತಿಗಳು ಬಂದರೆ ಸಂಬಂಧ ಇದೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳು ಮನೆ ಕಟ್ಟಿಕೊಂಡಿರುವ ಜಾಗ ಅವರ ಭಾಗಕ್ಕೆ ಬಂದ ಆಸ್ತಿ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿಗೂ ಮತ್ತು ನಮ್ಮ ಕುಟುಂಬಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ಪ್ರತಿವಾದಿಯ ತಂದೆ ಹೆಸರಿನಲ್ಲಿ ಖಾತೆ ಇದ್ದು ಅದನ್ನು ಲಪಟಾಯಿಸಲು ಪ್ರತಿವಾದಿಯ ತಂದೆಯನ್ನು ಪಕ್ಷಗಾರರನ್ನಾಗಿ ಮಾಡದೆ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಡಿಕ್ರಿ ಬರೆಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ಸೇರಿದ ಆಸ್ತಿಯನ್ನು ಲಪಟಾಯಿಸುವ ಸಲುವಾಗಿ ನಾನು ನನ್ನ ಸಹೋದರರು ಷಾಮೀಲಾಗಿ ಸುಳ್ಳು ಡಿಕ್ರಿ ಬರೆಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

6) ನಿಪಿ 1 ಡಿಕ್ರಿಯ ಪ್ರಕಾರ ನಾವು ಖಾತೆ ಮಾಡಿಸಿಕೊಳ್ಳಲು ಪ್ರಯತ್ನಿಸಿಲ್ಲ ಎಂದರೆ ಸಾಕ್ಷಿಯು ನೆನಪಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನಲ್ಲಿ ಪ್ರತಿವಾದಿ ಸ್ವಾಧೀನ ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿ ತಹಸೀಲ್ದಾರ್ ರವರಿಗೆ ಅರ್ಜಿ ನೀಡಿ ದಾವಾ ಸ್ವತ್ತನ್ನು ಅಳತೆ ಮಾಡಿಸಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಸದರಿ ಸ್ವತ್ತು ನಮಗೆ ಸೇರಿದ್ದು ಎಂದು ನುಡಿಯುತ್ತಾರೆ. ಸದರಿ ಆಸ್ತಿಯ ಪಕ್ಕದಲ್ಲಿ ಜಲೇಂದ್ರ ಎಂಬುವವರು ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿ, ಜಲೇಂದ್ರ ರವರ ವಿರುದ್ಧ ಒತ್ತುವರಿ ಮಾಡಿರುವ ಆಸ್ತಿಯನ್ನು ಸ್ವಾಧೀನ ಕೋರಿ ದಾವೆ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಖಾತೆ ಮೊದಲಿಗೆ 1 ನೇ ಪ್ರತಿವಾದಿಯ ತಂದೆಯ ಹೆಸರಿಗೆ ಇದ್ದು ನಂತರ 1 ನೇ ಪ್ರತಿವಾದಿ ಹೆಸರಿಗೆ ಬಂದು ಈಗ 2 ನೇ ಪ್ರತಿವಾದಿ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ನನ್ನ

ತಂದೆಗೆ ಬಂದ ಆಸ್ತಿಗಳನ್ನು ಮಾರಾಟ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಸುಳ್ಳು ದಾಖಲೆಯ ಆಧಾರದ ಮೇಲೆ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರಧನ್ಯಾದಂ., ಕೆ.ಆರ್.ನಗರ.